ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 07-07-2017

# ಪತ್ರಿಕಾ ಆಮಂತ್ರಣ

1. ಡಾ: ಬಿ.ಆರ್. ಅಂಬೇಡ್ಕರ್ ಅವರ 126 ನೇ ವರ್ಷಾಚರಣೆ ಅಂಗವಾಗಿ

ಅಂತಾರಾಷ್ಟ್ರೀಯ ಸಮ್ಮೇಳನ ಕುರಿತು ಪತ್ರಿಕಾಗೋಷ್ಠಿ:

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 8-7-2017 ಶನಿವಾರ ಬೆಳಿಗ್ಗೆ 10-00 ಗಂಟೆಗೆ

ಸ್ಥಳ: ಕೊಠಡಿ ಸಂಖ್ಯೆ 334, ಮೂರನೇ ಮಹಡಿ, ಸಮ್ಮೇಳನ ಸಭಾಂಗಣ, ವಿಧಾನ ಸೌಧ ಬೆಂಗಳೂರು

2. ಸಾವಯವ ಮತ್ತು ಸಿರಿಧಾನ್ಯ ಮೇಳದ ಉದ್ಘಾಟನಾ ಸಮಾರಂಭ:
ಉದ್ಘಾಟನೆ: ಕೃಷ್ಣಬೈರೇಗೌಡ, ಕೃಷಿ ಸಚಿವರು
ಮಳಿಗೆ ಉದ್ಘಾಟನೆ: ಎಂ. ಕೃಷ್ಣಪ್ಪ, ವಸತಿ ಸಚಿವರು
ದಿನಾಂಕ: 8-07-2017 ಶನಿವಾರ, ಸಮಯ: ಬೆಳಿಗ್ಗೆ 11-00 ಗಂಟೆಗೆ
ಸ್ಥಳ: ನಾಗರಬಾವಿ ಸರ್ಕಲ್ ಹತ್ತಿರದ ಮೈದಾನ, ನಾಗರಬಾವಿ, ಬೆಂಗಳೂರು.

3. ಕರ್ನಾಟಕ ಉಚ್ಛ ನ್ಯಾಯಾಲಯದ ಸಿಬ್ಬಂದಿ ವಸತಿ ಸಮುಚ್ಚಯದ ಉದ್ಘಾಟನೆ:
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿ:
ಗೌರವಾನ್ವಿತ ನ್ಯಾಯಮೂರ್ತಿ ಮೋಹನ್ ಎಂ. ಶಾಂತನಗೌಡರ್,
ನ್ಯಾಯಮೂರ್ತಿಗಳು, ಭಾರತದ ಸರ್ವೋಚ್ಚ ನ್ಯಾಯಾಲಯ

ಗೌರವಾನ್ವಿತ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್
ನ್ಯಾಯಮೂರ್ತಿಗಳು, ಭಾರತದ ಸರ್ವೋಚ್ಚ ನ್ಯಾಯಾಲಯ

**ಅಧ್ಯಕ್ಷತೆ:**

**ಗೌರವಾನ್ವಿತ ನ್ಯಾಯಮೂರ್ತಿ ಸುಬ್ರೋ ಕಮಲ್ ಮುಖರ್ಜಿ, ಮುಖ್ಯ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ.**

**ದಿನಾಂಕ: 08–07–2017, ಶನಿವಾರ, ಸಮಯ: ಬೆಳಿಗ್ಗೆ 11.00 ಗಂಟೆಗೆ**

**ಸ್ಥಳ: ಕರ್ನಾಟಕ ಉಚ್ಚ ನ್ಯಾಯಾಲಯದ ಸಿಬ್ಬಂದಿ ವಸತಿ ಸಮುಚ್ಚಯ ಆವರಣ, ಬೈಯಪ್ಪನಹಳ್ಳಿ, ಎನ್.ಜಿ.ಇ.ಎಫ್ ಲೇಔಟ್, ಬೆಂಗಳೂರು – 560 038**

**4. ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ವತಿಯಿಂದ**

ವನಮಹೋತ್ಸವ – 2017 ಕರ್ನಾಟಕ ರಾಜ್ಯಾದ್ಯಂತ ಬೃಹತ್ ಗಿಡ ನೆಡುವ ಕಾರ್ಯಕ್ರಮ.

ಉದ್ಘಾಟನೆ:
ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ
ಘನ ಉಪಸ್ಥಿತಿ:
ಡಿ.ವಿ. ಸದಾನಂದ ಗೌಡ, ಕೇಂದ್ರದ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವರು.
ಅನಂತ ಕುಮಾರ್, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು.
ಬಿ. ರಮಾನಾಥ ರೈ, ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವರು.
ಅಧ್ಯಕ್ಷತೆ:
ದಿನೇಶ್ ಗುಂಡೂರಾವ್, ವಿಧಾನಸಭಾ ಸದಸ್ಯರು, ಗಾಂಧಿನಗರ ವಿಧಾನಸಭಾ ಕ್ಷೇತ್ರ.
ದಿನಾಂಕ: 09–07–2017, ಭಾನುವಾರ ಸಮಯ: ಬೆಳಿಗ್ಗೆ 10.00 ಗಂಟೆಗೆ
ಸ್ಥಳ: ಸ್ವಾತಂತ್ರ್ಯ ಉದ್ಯಾನವನ (ಫ್ರೀಡಂ ಪಾರ್ಕ್), ಶೇಷಾದ್ರಿ ರಸ್ತೆ, ಗಾಂಧಿನಗರ–560 009

5.“ಬೆಳ್ಳಿ ಹೆಜ್ಜೆ” ಯಲ್ಲಿ ನಮ್ಮೊಂದಿಗೆ ಪಿ. ಶೇಷಾದ್ರಿ ಅವರೊಂದಿಗೆ ಸಂವಾದ
ಮುಖ್ಯ ಅತಿಥಿಗಳು:
ಡಾ. ಜಯಮಾಲಾ, ವಿಧಾನ ಪರಿಷತ್ ಸದಸ್ಯರು ಹಾಗೂ ಹಿರಿಯ ಕಲಾವಿದರು.

ಗಿರೀಶ್ ಕಾಸರವಳ್ಳಿ, ಪದ್ಮಶ್ರೀ ಪುರಸ್ಕೃತ ಚಲನಚಿತ್ರ ನಿರ್ದೇಶಕರು,
ಎನ್.ಆರ್. ವಿಶುಕುಮಾರ್, ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ.
ಸಾ.ರಾ. ಗೋವಿಂದು, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ,

ಅಧ್ಯಕ್ಷತೆ:

ಎಸ್.ವಿ. ರಾಜೇಂದ್ರಸಿಂಗ್ ಬಾಬು, ಅಧ್ಯಕ್ಷರು, ಕರ್ನಾಟಕ ಚಲನಚಿತ್ರ ಅಕಾಡೆಮಿ.

**ದಿನಾಂಕ: 10-07-2017, ಸೋಮವಾರ ಸಮಯ : ಸಂಜೆ 5-00 ಗಂಟೆಗೆ**

**ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿ ಭವನ, ಕುಮಾರ ಪಾರ್ಕ್ ರಸ್ತೆ, ಬೆಂಗಳೂರು.**

6. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮೂಲಕ ಹೊರತಂದ 32 ಸಂಪುಟಗಳ ಲೋಕಾರ್ಪಣೆ

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.
ದಿನಾಂಕ: 10-07-2017, ಸೋಮವಾರ ಸಮಯ : ಸಂಜೆ 6.00 ಗಂಟೆಗೆ.
ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಂಗಳೂರು.

6.ಪತ್ರಿಕಾಗೋಷ್ಠಿ:

ಕರ್ನಾಟಕ ರಾಜ್ಯ "ಹಿರಿಯ ಪೊಲೀಸ್ ಅಧಿಕಾರಿಗಳ ಪರಿಶೀಲನಾ ಸಭೆ'ಯ ನಂತರ ಪತ್ರಿಕಾಗೋಷ್ಠಿ

ಮುಖ್ಯ ಅತಿಥಿ:

ಸಿದ್ದರಾಮಯ್ಯ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ದಿನಾಂಕ: 10-07-2017, ಸೋಮವಾರ ಸಮಯ : ಮಧ್ಯಾಹ್ನ 12.30 ಗಂಟೆಗೆ
ಸ್ಥಳ: ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರವರ ಕಚೇರಿ, ಕರ್ನಾಟಕ ರಾಜ್ಯ, ಬೆಂಗಳೂರು.

**<u>ಪತ್ರಿಕಾ ಪ್ರಕಟಣೆ</u>**

## ದಕ್ಷಿಣ ರಾಜ್ಯಗಳ ಹಿಂದುಳಿದ ವರ್ಗಗಳ ಆಯೋಗಗಳಿಂದ

## 2017 ರ ಸಂವಿಧಾನದ 123ನೇ ತಿದ್ದುಪಡಿ ಮಸೂದೆ ಕುರಿತು ನಿರ್ಣಯ ಸಲ್ಲಿಕೆ

**ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)**

2017 ರ ಸಂವಿಧಾನದ 123 ನೇ ತಿದ್ದುಪಡಿ ಮಸೂದೆ ಕುರಿತ ಸಾಧಕ ಬಾಧಕಗಳ ಚರ್ಚೆ ನಡೆಸಲು ಇಂದು ಬೆಳಿಗ್ಗೆ ಕ್ಯಾಪಿಟಲ್ ಹೋಟೆಲ್‌ನಲ್ಲಿ ಜರುಗಿದ ದಕ್ಷಿಣ ರಾಜ್ಯಗಳ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರುಗಳ ಸಭೆಯಲ್ಲಿ ಕೇಂದ್ರಕ್ಕೆ ಸಲ್ಲಿಸುವ ನಿರ್ಣಯವನ್ನು ಅನುಮೋದಿಸಲಾಯಿತು.

ಬೆಳಿಗ್ಗೆ ಪ್ರಾರಂಭವಾದ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಮಾಜ ಕಲ್ಯಾಣ ಸಚಿವರಾದ ಹೆಚ್. ಆಂಜನೇಯ ಅವರು ಸಂವಿಧಾನ ತಜ್ಞರು ಹಿಂದುಳಿದ ವರ್ಗದವರು ಮೀಸಲಾತಿಯಿಂದ ವಂಚಿತರಾಗದಂತೆ ಮತ್ತು ಅವರ ಹಿತಾಸಕ್ತಿಗೆ ಧಕ್ಕೆಯಾಗದಂತೆ ವರದಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡುವಂತೆ ಸೂಚಿಸಿದರು.

ಸಭೆಯಲ್ಲಿ ತಿದ್ದುಪಡಿಯಲ್ಲಿರುವ ಸಾಧಕ ಬಾಧಕಗಳ ಬಗ್ಗೆ ಕೇರಳ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಜಿ. ಶಿವರಾಜನ್, ಮತ್ತು ಆಂಧ್ರಪ್ರದೇಶ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಕೆ.ಎಲ್. ಮಂಜುನಾಥ್, ಪುದುಚೇರಿಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ನ್ಯಾಯಮೂರ್ತಿ ಕೆ. ಮೋಹನ್‌ರಾಮ್ ಮತ್ತು ತೆಲಂಗಾಣ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಬಿ.ಎಸ್. ರಾಮುಲು ಅವರು ಸುಧೀರ್ಘವಾಗಿ ಈ ತಿದ್ದುಪಡಿಯ ಕುರಿತು ತಮ್ಮ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಂಡರು.

ನಮ್ಮ ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಹೆಚ್. ಕಾಂತರಾಜು ಅವರು ಈ ತಿದ್ದುಪಡಿಗೆ ನಮ್ಮ ವಿರೋಧವೇನೂ ಇಲ್ಲ. ಆದರೆ ಇದರಿಂದ ಹಿಂದುಳಿದ ವರ್ಗಗಳ ಹಿತಾಸಕ್ತಿಗೆ ಧಕ್ಕೆಯಾಗುವಂತಹ ಕೆಲವು ಬಾಧಕಗಳನ್ನು ಸರಿಪಡಿಸಬೇಕೆಂಬುದಷ್ಟೆ ಎಂದರು.

ಹಿಂದುಳಿದ ವರ್ಗಗಳಿಗೆ ನೀಡುತ್ತಿರುವ ಮೀಸಲಾತಿ ಮತ್ತು ಸವಲತ್ತುಗಳನ್ನು ಮೊಟಕುಗೊಳಿಸಬಾರದು. ಹಿಂದುಳಿದ ವರ್ಗಗಳನ್ನು ಗುರುತಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡಬೇಕು ಎಂದು ಅವರು ಆಗ್ರಹಿಸಿದರು.

ಬೆಳಿಗ್ಗೆಯಿಂದ ಸಂಜೆಯವರೆಗೆ ಸುಧೀರ್ಘವಾಗಿ ಚರ್ಚೆ ನಡೆದ ನಂತರ ಒಮ್ಮತದಿಂದ ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಸಿದ್ದಪಡಿಸಲಾದ ನಿರ್ಣಯಕ್ಕೆ ಐದು ರಾಜ್ಯದ ಆಯೋಗದ ಅಧ್ಯಕ್ಷರು ಸಹಿ ಹಾಕಿದರು. ಸಭೆಯ ನಿರ್ಣಯವನ್ನು ಆಯೋಗದ ಅಧ್ಯಕ್ಷರಾದ ಹೆಚ್. ಕಾಂತರಾಜುಯ ಅವರು ಓದಿ ಹೇಳಿದರು.

ಸಭೆಯಲ್ಲಿ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯ ಕಾರ್ಯದರ್ಶಿ ವಿ. ಅನ್ಬುಕುಮಾರ್, ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಸದಸ್ಯರಾದ ಎಂ. ಗುರುಲಿಂಗಯ್ಯ, ಶರಣಪ್ಪ, ಡಿ. ಮನೆಗರ್,

ಜಿ.ಡಿ. ಗೋಪಾಲ್ ಎಲ್ .ಪಿ. ಧರ್ಮರಾಜನ್, ಕೆ.ಎನ್. ಲಿಂಗಪ್ಪ ಸೇರಿದಂತೆ ಹಿರಿಯ ಅಧಿಕಾರಿಗಳೂ ಉಪಸ್ಥಿತರಿದ್ದರು.

(ನಿರ್ಣಯದ ಪ್ರತಿ ಹಾಗೂ ಛಾಯಾಚಿತ್ರಗಳನ್ನು ಲಗತ್ತಿಸಿದೆ.)

## ಜುಲೈ 10 ರಂದು ಮುಖ್ಯಮಂತ್ರಿಗಳಿಂದ ಕರ್ನಾಟಕ ತತ್ವಪದಕಾರರ 32 ಸಂಪುಟಗಳ ಲೋಕಾರ್ಪಣೆ

**ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)**

ಕರ್ನಾಟಕ ತತ್ವಪದಕಾರರ ಸಮಗ್ರ ಸಾಹಿತ್ಯ ಪ್ರಕಟಣಾ ಯೋಜನೆಯಡಿ ಇದೇ ಜುಲೈ 10 ರಂದು ಸಂಜೆ 6.00 ಗಂಟೆಗೆ ರವೀಂದ್ರ ಕಲಾಕ್ಷೇತ್ರದಲ್ಲಿ ಮೂವತ್ತೆರಡು ಸಂಪುಟಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಾರ್ಪಣೆ ಮಾಡಲಾಗುವುದೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕರಾದ ಎಂ.ಎಸ್. ಅರ್ಚನಾ ತಿಳಿಸಿದರು.

ಅವರು ಇಂದು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧಣಾ ಕೇಂದ್ರ, ಬೆಂಗಳೂರು ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರದ ಸಹಕಾರದೊಂದಿಗೆ 32 ಸಂಪುಟಗಳನ್ನು ಹೊರತರಲಾಗಿದೆ ಎಂದರು.

ಪ್ರಸ್ತುತ ಮಾಲೆಯಲ್ಲಿ ಶಿಶುನಾಳ ಶರೀಫ್, ನಿಜಗುಣ ಶಿವಯೋಗಿ, ಕಡಕೋಳ ಮಡಿವಾಳಪ್ಪ, ಶಂಕರಾನಂದಯೋಗಿ, ಗುರು ಖಾದರಿ, ಪೀರ, ಚೆನ್ನೂರು, ಜಲಾಲ ಸಾಹೇಬ, ಕುಕಡೊಳ್ಳಿ ಹಸನಾ ಸಾಹೇಬ, ಶಿಲವೇರಿ ಶಿವಪ್ಪ, ಅಲ್ಲೀಪಾರ್ಯ, ತುರುವನೂರು ಲಿಂಗಾಣ್ಣರ್ಯರು, ಕಲ್ಲೂರು ರುದ್ರಮುನಿದೇವ, ಘನಮಠ ಶಿವಯೋಗಿಗಳು, ಹಾಗಲವಾಡಿ ಮುದ್ದುವೀರಸ್ವಾಮಿಗಳು, ಕೈವಾರ ನಾರೇಯಣಪ್ಪ, ಸೋಮೆಕಟ್ಟೆ ಕರಿವೃಷಭೇಂದ್ರಸ್ವಾಮಿ, ಚಿದಾನಂದಾಧೂತರು, ನೀರಲಕೇರಿ ಬಸವಲಿಂಗ ಶರಣರು, ಬಾಲಲೀಲಾ ಮಹಾಂತ, ಸಿದ್ಧಪ್ರಭು, ಮರಕುಂದಿ ಬಸವಣ್ಣಪ್ಪ, ಸರ್ಪಭೂಷಣ ಶಿವಯೋಗ, ರಾಂಪೂರದ ಬಕ್ಕಪ್ಪ, ಹೊನ್ನೇನಹಳ್ಳಿ ದಾಸಗಿರಿಯಪ್ಪ, ಸಕ್ರಪ್ಪತಾತ, ಕೊಡೇಕಲ್ ಬಸವಣ್ಣನವರು, ಹೊಳಲಗುಂದಿ ಸಾಯಿಬಣ್ಣ, ಕನಕದಾಸರು ಮತ್ತು ಮಹಿಪತಿರಾಯರು, ವೀಣಾಗುರುಬಸವಾರ್ಯ, ಪರಮದೇವ, ನರಹರಿಗುರು, ಮುಪ್ಪಿನ ಷಡಕ್ಷರಿ, ನಿಜಗುಣ ಶಿವಯೋಗಿ, ಉಡುತಡಿಯ ಅಕ್ಕಮಹಾದೇವಿ, ಕಲ್ಯಾಣದ ನೀಲಾಂಬಿಕೆ, ಹಾಗಲ್ವಾಡಿ ಮುದಿಯಪ್ಪ ನಾಯಕರ

ಮಗಳು, ಬಿದನೂರ ಗಂಗಮ್ಮ, ಖೈನೂರಿನ ರಾಚವ್ವ, ಜತ್ತ ಶಿವಲಿಂಗವ್ವ, ರಾಯಚೂರಿನ ಹನುಮಂತವ್ವ, ತಾವರೆಕೆರೆ ವೀರದಾಸಮ್ಮ, ಸೋಲ್ಲಾಪುರದ ಜಯದೇವಿತಾಯಿ, ಬಸವಕಲ್ಯಾಣದ ಫೈಮುದಾ ಫಾತಿಮಾ, ಹುಲಸೂರಿನ ಕಾಡಾದಿ ಗೌರಮ್ಮ, ಮೈಸೂರಿನ ಹಸನ್ ಮಾತಾಜಿ, ಮುಂತಾದವರ ತತ್ವಪದಗಳ ಸಂಪುಟಗಳು ಹೊರಬರುತ್ತಿವೆ.

ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಮೂಲಕ ಈ ಯೋಜನೆ ಸಕಾರಗೊಳ್ಳುತ್ತಿವೆ. ಈ ಯೋಜನೆಯ ಅನುಷ್ಠಾನಕ್ಕೆ ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಮುಕ್ತ ಮನಸ್ಸಿನಿಂದ ಆರ್ಥಿಕ ನೆರವು ನೀಡಿದೆ. ಸಾಹಿತ್ಯ ಸಿದ್ಧತೆ ಮತ್ತು ಪರಿಶೀಲನೆಗೆ ನೆರವಾಗಲು ವಿದ್ವಾಂಸರ ಒಂದು ಸಂಪಾದಕರ ಮಂಡಳಿಯನ್ನು ನೇಮಿಸಿ, ಜಿಲ್ಲೆಗೆ ಒಬ್ಬ ವಿದ್ವಾಂಸರನ್ನು ಸಂಪಾದಕರನ್ನಾಗಿಸಿ ಈ ತತ್ವಪದಗಳನ್ನು ಪ್ರಕಟಿಸಲಾಗಿದೆ. ಮೊದಲ ಹಂತದಲ್ಲಿ 32 ಸಂಪುಟಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಇವುಗಳನ್ನು ಇಡಿಯಾಗಿ ಬೆಲೆ ನಿಗದಿಗೊಳಿಸಿ ಮಾರಾಟಕ್ಕಿಡಲಾಗಿದೆ. ಆಸಕ್ತರು ತಮಗೆ ಬೇಕಾದ ಸಂಪುಟಗಳನ್ನು ಪಡೆಯಲು ಅನುಕೂಲವಾಗುವಂತಗೆ ಬಿಡಿಬಿಡಿಯಾಗಿ ಬೆಲೆ ನಿಗದಿಗೊಳಿಸಲಾಗಿದೆ. ಪ್ರಥಮ ಹಂತದಲ್ಲಿ ಸುಮಾರು 11,400 ಪುಟಗಳಷ್ಟಾಗುವ ಈ 32 ಸಂಪುಟಗಳ ಮುಖಬೆಲೆ 2094 ರೂ. ಎಂದರು.

ಈ ಸಮಗ್ರ ತತ್ವಪದಗಳ ಮಾಲೆಯನ್ನು 2014 ರ ಸೆಪ್ಟೆಂಬರ್‌ನಲ್ಲಿ ಆರಂಭಿಸಲಾಗಿದ್ದು, ಐದು ವರ್ಷಗಳ ಯೋಜನೆ ಇದಾಗಿದೆ. ಇದರ ಒಟ್ಟು ಯೋಜನಾ ವೆಚ್ಚ 435 ಲಕ್ಷಗಳು. ಈಗಾಗಲೇ ಸರ್ಕಾರದ 180 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಈ ಪ್ರಕಟಣಾ ಯೋಜನೆಗೆ 80 ಜನ ವಿದ್ವಾಂಸರು ನೆರವಾಗುತ್ತಿದ್ದಾರೆ. ಮುಂದುವರೆದು 2ನೇ ಹಂತದಲ್ಲಿ 22 ರಿಂದ 25 ಸಂಪುಟಗಳಾಗುವ ಸಾಹಿತ್ಯ ಲಭ್ಯವಿದೆ. ಈ ಗ್ರಂಥಗಳು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕನ್ನಡ ಪುಸ್ತಕ ಪ್ರಾಧಿಕಾರವು ಜಿಲ್ಲಾ ಕೇಂದ್ರಗಳಲ್ಲಿ ತೆರೆದಿರುವ ಪುಸ್ತಕ ಮಾರಾಟ ಮಳಿಗೆಯಲ್ಲಿ ದೊರಕುವಂತೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಪಾದನಾ ಸಮಿತಿಯ ಅಧ್ಯಕ್ಷರಾದ ಡಾ. ಕೆ. ಮುರುಳಸಿದ್ಧಪ್ಪ ಅವರು ಉಪಸ್ಥಿತರಿದ್ದರು.

ಎಸ್‌ಎಂ:ಕೆಎನ್‌ಕೆ:ಜಿಪಿಆರ್.

## ಸಾಮಾಜಿಕ ಬೆಳವಣಿಗೆಗೆ ಸಹಕಾರ ಕ್ಷೇತ್ರ ಮತ್ತು ಸಹಕಾರ ಸಂಘಗಳ ಪಾತ್ರ ಮುಖ್ಯ- ಮುಖ್ಯಮಂತ್ರಿ ಸಿದ್ದರಾಮಯ್ಯ

**ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)**

ಸಮಾಜದಲ್ಲಿ ಸಾಮಾಜಿಕ ಆರ್ಥಿಕ ಚಟುವಟಿಕೆಗಳು ಹೆಚ್ಚಿ ಸಾಮಾಜಿಕ ಬೆಳವಣಿಗೆಯಾಗುವಲ್ಲಿ ಸಹಕಾರ ಕ್ಷೇತ್ರ ಮತ್ತು ಸಹಕಾರ ಸಂಘಗಳ ಪಾತ್ರ ಮುಖ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದರು. ಅವರು ಇಂದು ನಗರದ ಹೃದಯ ಭಾಗವಾದ ಮಲ್ಲೇಶ್ವರದ ಮಾರ್ಗೋಸಾ ರಸ್ತೆಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಸಿದ್ಧನಗೌಡ ಸಂಣರಾಮನಗೌಡ ಪಾಟೀಲ ಸಹಕಾರಿ ಭವನವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು.

ಇಂದು 9.20 ಕೋಟಿ ರೂ. ಗಳಲ್ಲಿ ನಿರ್ಮಾಣವಾಗಿರುವ ಸಹಕಾರಿ ಸೌಧಕ್ಕೆ ಈ ಹಿಂದೆ ಶಂಕು ಸ್ಥಾಪನೆಯನ್ನು ಮಾಡಿ ಈಗ ಕಟ್ಟಡದ ಉದ್ಘಾಟನೆಯನ್ನ್ನ ನೆರವೇರಿಸುತ್ತಿರುವುದು ಖುಷಿ ತಂದಿದೆ. ಎಂದರು. ಇದೇ ಸಂದರ್ಭದಲ್ಲಿ ಸಹಕಾರ ಇಲಾಖೆಯ ಸಚಿವರಾಗಿದ್ದ ದಿ|| ಹೆಚ್ ಸಿ. ಮಹದೇವಯ್ಯ ಅವರನನ್ನು ನೆನೆದ ಅವರು ಮಹದೇವಯ್ಯನವರ ಕನಸಿನ ಕೂಸು ಈ ಸೌಧ ಎಂದರು. ನಗರದ ಹೃದಯಭಾಗವಾದ ಮಲ್ಲೇಶ್ವರದಲ್ಲಿ ನಿರ್ಮಾಣವಾಗಿರುವುದು ಎಲ್ಲರಿಗೂ ಸ್ಫೂರ್ತಿ ಹಾಗೂ ಹೆಮ್ಮೆ ತಂದಿದೆ ಎಂದರು. ಇದೇ ಸಂದರ್ಭದಲ್ಲಿ ಮಲ್ಲೇಶ್ವರದ ಶಾಸಕರಾದ ಡಾ|| ಸಿ.ಎನ್. ಅಶ್ವತ್ಥನಾರಾಯಣ ಅವರ ಕೋರಿಕೆಯ ಮೇರೆಗೆ ಇಂದು ಉದ್ಘಾಟನೆಗೊಂಡ ಈ ಸೌಧಕ್ಕೆ ಸಿದ್ಧನಗೌಡ ಸಂಣರಾಮನಗೌಡ ಪಾಟೀಲ ಅವರ ಹೆಸರನ್ನು ಇಡಲಾಗುವುದು ಎಂದು ತಿಳಿಸುತ್ತಾ 113 ವರ್ಷಗಳ ಇತಿಹಾಸವಿರುವ ಸಹಕಾರ ಕ್ಷೇತ್ರದ ಪ್ರಥಮ ಸಹಕಾರ ಸಂಘವನ್ನು 1905 ರಲ್ಲಿ ಸ್ಥಾಪಿಸಿದ ಸಹಕಾರ ಕ್ಷೇತ್ರದ ಪಿತಾಮಹ ಅವರು ಎಂದರು.

ಆಡು ಮುಟ್ಟದ ಸೊಪ್ಪಿಲ್ಲ ಎಂಬ ಗಾದೆಯಂತೆ, ಸಹಕಾರಿ ಸಂಘವಿಲ್ಲದ ಯಾವುದೇ ಕ್ಷೇತ್ರವಿಲ್ಲ, ಯಾವುದೇ ಕ್ಷೇತ್ರದ ಬೆಳವಣಿಗೆಯಾಗಬೇಕಾದರೆ ಅದು ಸಹಕಾರ ಸಂಘಗಳ ಮೂಲಕ ಮಾತ್ರ ಸಾಧ್ಯ ಎಂಬ ಗಾಂಧೀಜಿಯವರ ಮಾತನ್ನು ನೆನೆಯುತ್ತಾ ನೆಹರೂ ಅವರು ಸಹ ಯಾವುದೇ ಗ್ರಾಮದ ಸರ್ವತೋಮುಖ ಅಭಿವೃದ್ಧಿಯಾಗಬೇಕಾದರೆ ಮುಖ್ಯವಾಗಿ ಆ ಗ್ರಾಮದಲ್ಲಿ ಸಹಕಾರ ಸಂಘ, ಗ್ರಾಮ ಪಂಚಾಯಿತಿ, ಶಾಲೆ ಈ ಮೂರು ಮುಖ್ಯವಾಗಿರಬೇಕು ಎಂದಿದ್ದಾರೆ. ಬಹುತೇಕವಾಗಿ ರಾಜಕಾರಣಿಗಳು ಸಹಕಾರ ಕ್ಷೇತ್ರದಿಂದ ಬಂದವರಾಗಿರುತ್ತಾರೆ ಎಂದು ಅವರು ಸ್ಮರಿಸಿದರು.

ಇವತ್ತು 41 ಸಾವಿರ ಸಹಕಾರ ಸಂಘಗಳಿವೆ, 2.5 ಕೋಟಿ ಜನ ಸದಸ್ಯರಿಂದ ಹೆಮ್ಮರವಾಗಿ ಬೆಳೆದಿರುವ ಸಹಕಾರ ಸಂಘ, ಸಹಕಾರ ಬ್ಯಾಂಕ, ಸೊಸೈಟಿ ಗಳಿಂದ ರೈತರಿಗೆ 11 ಸಾವಿರ ಕೋಟಿ ರೂ. ವರೆಗೆ ಸಾಲ ಕೊಡಲಾಗಿದೆ. ಸರ್ಕಾರ 3.00 ಲಕ್ಷದವರೆಗೆ ಬಡ್ಡಿರಹಿತ ಸಾಲ ಕೊಟ್ಟಿದೆ. 50 ಸಾವಿರ ರೂ. ವರೆಗಿನ ಸಾಲ ಮನ್ನಾ ಮಾಡಿದೆ. ಇವತ್ತು 14 ಸಾವಿರ ಹಾಲು ಉತ್ಪಾದಕರ ಸಂಘಗಳಿವೆ, 73 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ನಮ್ಮ ಸರ್ಕಾರ ಲೀ. ಗೆ 3 ರೂ. ಯಂತೆ 3.70 ಕೋಟಿ ರೂ. ಗಳ ವರೆಗೆ ಸಬ್ಸಿಡಿ ಕೊಟ್ಟಿದೆ. ಇದರಿಂದ ಆರ್ಥಿಕ ಚೈತನ್ಯ ತುಂಬಲಾಗುತ್ತಿದೆ. ಗಾಂಧೀಜಿ, ಅಂಬೇಡ್ಕರ್ ಅವರು ಹೇಳಿರುವಂತೆ ಒಟ್ಟಾರೆ ಸರ್ವರಿಗೂ ಸಮ ಪಾಲು ಸರ್ವರಿಗೂ ಸಮ ಬಾಳು ಸಿಗುವಂತಾಗಬೇಕು ಎಂದರು.

ಕೇಂದ್ರ ಸಚಿವರಾದ ಡಿ. ವಿ. ಸದಾನಂದ ಗೌಡ ಅವರು ಮಾತನಾಡಿ ಭಾರತದ ಕೌಟುಂಬಿಕ ವ್ಯವಸ್ಥೆ, ಉಳಿತಾಯದ ಪರಿಕಲ್ಪನೆಯಿಂದಾಗಿ ಭಾರತಕ್ಕೆ ಜಾಗತಿಕ ಹಿನ್ನಡೆಯ ಬಿಸಿ ತಾಗಲಿಲ್ಲ. ಭಾರತದಲ್ಲಿ ಸಹಕಾರಿ ತತ್ವ ಪ್ರತಿ ಕುಟುಂಬದಲ್ಲೂ ಇದೆ. ಆ ಮೂಲಕ ಸಹಕಾರ ಸಂಘ ಅದ್ಭುತ ಕೊಡುಗೆಯನ್ನು ಕೊಟ್ಟಿದೆ. ಕೃಷಿ ಕ್ಷೇತ್ರಕ್ಕೆ ಸಹಕಾರ ಸಂಘಗಳು ನೀಡುವ ಸಾಲದಿಂದ ಆರ್ಥಿಕ ಸುವ್ಯವಸ್ಥೆಯ ಸಮತೋಲನಕ್ಕೆ ಕಾರಣವಾಗಿದೆ.

ಮಲ್ಲೇಶ್ವರದ ಈ ಸಹಕಾರ ಸೌಧದ ಮೂಲಕ ಅಂತಹಾ ಉತ್ತಮ ಕೆಲಸ ನಡೆಯುತ್ತಿದೆ. ಸಮಾಜದಲ್ಲಿ ಆರ್ಥಿಕ ಶಿಸ್ತು ಬೆಳೆಯಬೇಕು. ಆರ್ಥಿಕ ವ್ಯವಸ್ಥೆಯೊಳಗೆ ಪ್ರತಿಯೊಬ್ಬರನ್ನು ತರಬೇಕು. ಆದ್ದರಿಂದಲೇ ಕೇಂದ್ರ ಸರ್ಕಾರದಿಂದ 21 ಕೋಟಿಗೂ ಅಧಿಕ ಜನರಿಗೆ ಜನ್-ಧನ್ ಯೋಜನೆಯಡಿ ಸೇರಿಸಲಾಗಿದೆ. ಇದರಿಂದ ಸಾಮಾನ್ಯ ಜನ ಕೂಡ ಬ್ಯಾಂಕಿಗೆ ಹೋಗಬಹುದಾಗಿದ್ದು, ಆ ಮೂಲಕ ಆರ್ಥಿಕ ಸ್ಥಿರತೆ, ಜೋಡಣೆ, ಶಿಸ್ತು ಮೂರು ಅಂಶಗಳಿಂದ ಭಾರತ ರೂಪುಗೊಳ್ಳುತ್ತಿದೆ ಎಂದರು.

ಮಲ್ಲೇಶ್ವರದ ಶಾಸಕರಾದ ಡಾ। ಸಿ. ಎನ್. ಅಶ್ವತ್ಥನಾರಾಯಣ, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಶಾಸಕರುಗಳಾದ ಬೈರತಿ ಬಸವರಾಜ್, ಎಸ್.ಡಿ. ಶೋಮಶೇಖರ್, ವಿಧಾನ ಪರಿಷತ್ತಿನ ಸದಸ್ಯರಾದ ಶರವಣ ಅವರು, ಸಹಕಾರ ಇಲಾಖೆ ಕಾರ್ಯದರ್ಶಿಗಳಾದ ಮಹೇಶ್ವರ್ ರಾವ್ ಉಪಸ್ಥಿತರಿದ್ದರು. ಸಹಕಾರ ಸಂಘಗಳ ನಿಬಂಧಕರಾದ ಎಂ.ಕೆ. ಅಯ್ಯಪ್ಪ ಅವರು ಸ್ವಾಗತಿಸಿದರು.

## ಕಾ.ತ. ಚಿಕ್ಕಣ್ಣ – ಗ್ರಂಥಗಳ ಲೋಕಾರ್ಪಣೆ

ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)

ಪಲ್ಲವ ಪ್ರಕಾಶನ, ಚನ್ನಪಟ್ಟಣ ಹಾಗೂ ಮಧುಚೇತನ ಪ್ರಕಾಶನ, ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ಜುಲೈ 12 ರಂದು ಸಂಜೆ 6.00 ಗಂಟೆಗೆ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಕಾ.ತ. ಚಿಕ್ಕಣ್ಣ ಅವರ ಗ್ರಂಥಗಳ ಲೋಕಾರ್ಪಣೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಅಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗ್ರಂಥಗಳ ಲೋಕಾರ್ಪಣೆ ಮಾಡಲಿದ್ದಾರೆ.

ಮೈಸೂರಿನ ಸಂಸ್ಕೃತಿ ಚಿಂತಕರಾದ ಡಾ. ಹಿ..ಶಿ ರಾಮಚಂದ್ರೇಗೌಡ ಹಾಗೂ ದೆಹಲಿಯ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆ ಅವರು ಕೃತಿಗಳ ಪರಿಚಯವನ್ನು ಮಾಡಿಕೊಡಲಿದ್ದಾರೆ.

ಮಾಜಿ ಸಚಿವ ಹಾಗೂ ಶಾಸಕರಾದ ಎಚ್. ಎಂ. ರೇವಣ್ಣ ಅವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಲಿದ್ದಾರೆ.

ಸಮಾರಂಭದಲ್ಲಿ ಕಾ.ತ. ಚಿಕ್ಕಣ್ಣ, ಲಕ್ಷ್ಮಣ ಕೊಡಸೆ ಹಾಗೂ ಎಚ್. ದಂಡಪ್ಪ ಅವರುಗಳು ಉಪಸ್ಥಿತರಿರುವರು.

ಈ ಸಂದರ್ಭದಲ್ಲಿ ಕಾ.ತ. ಚಿಕ್ಕಣ್ಣ ಜೀವನ ಸಾಹಿತ್ಯ ಕುರಿತು ಪಿ.ಎಚ್.ಡಿ. ಮತ್ತು ಎಂ.ಫಿಲ್ ಪಡೆದ ವಿದ್ವಾಂಸರಿಗೆ ಸಾಹಿತ್ಯ ಗೌರವ ನೀಡಲಾಗುವುದು. ಕಲಬುರಗಿ ಡಾ. ಅನ್ನಪೂರ್ಣದೇವು ಪಾಟೀಲ, ಬೆಂಗಳೂರಿನ ಡಾ. ರೇವಯ್ಯ ಒಡೆಯರ್, ಮೈಸೂರಿನ ಡಾ.

ಮಾಲಿನಿ ಎನ್. ಅಭ್ಯಂಕರ್ ಹಾಗೂ ಬಳ್ಳಾರಿಯ ದೊಡ್ಡಬಸಪ್ಪ ಅವರುಗಳು ಈ ಗೌರವ ಸಲ್ಲಲಿದೆ.

ಸಂಜೆ 5.00 ಗಂಟೆಗೆ ಕೆ.ಎಸ್. ಸುರೇಖಾ ಹಾಗೂ ಉದಯ್ ಅಂಕೋಲಾ ಅವರಿಂದ ಸುಗಮ ಸಂಗೀತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಎಸ್ಎಂ:ಜಿಪಿಆರ್.

## ವನ ಮಹೋತ್ಸವ – 2017

## ರಾಜ್ಯಾದ್ಯಂತ ಬೃಹತ್ ಗಿಡ ನೆಡುವ ಕಾರ್ಯಕ್ರಮ

**ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)**

ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಇಲಾಖೆ ವತಿಯಿಂದ ಜುಲೈ 9 ರ ಭಾನುವಾರದಂದು ಬೆಳಿಗ್ಗೆ 10.00 ಗಂಟೆಗೆ ಸ್ವಾತಂತ್ರ್ಯ ಉದ್ಯಾನವನ (ಫ್ರೀಡಂ ಪಾರ್ಕ್), ಶೇಷಾದ್ರಿ ರಸ್ತೆ, ಗಾಂಧಿನಗರ, ಬೆಂಗಳೂರು – 560 009 ಇಲ್ಲಿ "ವನ ಮಹೋತ್ಸವ – 2017 " ಕಾರ್ಯಕ್ರಮದಡಿ ರಾಜ್ಯಾದ್ಯಂತ ಬೃಹತ್ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ.

ಈ ಕಾರ್ಯಕ್ರಮದ ಉದ್ಘಾಟನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನೆರವೇರಿಸಲಿದ್ದಾರೆ,

ಕೇಂದ್ರ ಸಾಂಖ್ಯಿಕ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವ ಡಿ.ವಿ. ಸದಾನಂದ ಗೌಡ, ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಹಾಗೂ ಸಂಸದೀಯ ವ್ಯವಹಾರಗಳ ಸಚಿವ ಅನಂತ ಕುಮಾರ್ ಹಾಗೂ ಅರಣ್ಯ, ಜೀವಿ ಪರಿಸ್ಥಿತಿ ಮತ್ತು ಪರಿಸರ ಸಚಿವ ಬಿ. ರಮಾನಾಥ ರೈ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

ವಿಧಾನಸಭಾ ಸದಸ್ಯರು, ಗಾಂಧಿನಗರ ವಿಧಾನಸಭಾ ಕ್ಷೇತ್ರ ದಿನೇಶ್ ಗುಂಡೂರಾವ್ ಅವರು ಅಧ್ಯಕ್ಷತೆಯನ್ನು ವಹಿಸಲಿರುವ ಈ ಕಾರ್ಯಕ್ರಮದಲ್ಲಿ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ.

ಎಸ್ಎಂ:ಜಿಪಿಆರ್

# "ಬೆಳ್ಳಿಹೆಜ್ಜೆ" ಯಲ್ಲಿ ಪಿ. ಶೇಷಾದ್ರಿ

**ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)**

ಕರ್ನಾಟಕ ಚಲನಚಿತ್ರ ಅಕಾಡೆಮಿ ವತಿಯಿಂದ ಜುಲೈ 10 ರಂದು ಸಂಜೆ 5.00 ಗಂಟೆಗೆ ನಗರದ ಕುಮಾರ ಪಾರ್ಕ್ ರಸ್ತೆಯಲ್ಲಿರುವ ಮಹದೇವ ದೇಸಾಯಿ ಸಭಾಂಗಣದಲ್ಲಿ ಏರ್ಪಡಿಸಿರುವ "ಬೆಳ್ಳಿ ಹೆಜ್ಜೆ" ಕಾರ್ಯಕ್ರಮದಲ್ಲಿ ಖ್ಯಾತ ನಿರ್ದೇಶಕ ಪಿ. ಶೇಷಾದ್ರಿ ಅವರು ಭಾಗವಹಿಸಲಿದ್ದಾರೆ.

ಚಲನಚಿತ್ರ ಪತ್ರಕರ್ತರಾದ ಎಂ. ಗಣಪತಿ ಅವರು ಸಂವಾದ ನಿರ್ವಹಣೆ ಮಾಡಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯರು ಹಾಗೂ ಹಿರಿಯ ಕಲಾವಿದರು ಆದ ಡಾ. ಜಯಮಾಲಾ, ಪದ್ಮಶ್ರೀ ಪುರಸ್ಕೃತ ಚಲನಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನಿರ್ದೇಶಕ ಎನ್.ಆರ್. ವಿಶುಕುಮಾರ್ ಹಾಗೂ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ.ರಾ. ಗೋವಿಂದು ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ಎಸ್.ವಿ. ರಾಜೇಂದ್ರಸಿಂಗ್ ಬಾಬು ಅವರು ವಹಿಸಲಿದ್ದಾರೆ.

ಕರ್ನಾಟಕ ಚಲನಚಿತ್ರ ಅಕಾಡೆಮಿಯ ಮಾಜಿ ಅಧ್ಯಕ್ಷ ಟಿ.ಎಸ್. ನಾಗಭರಣ, ಖ್ಯಾತ ಚಲನಚಿತ್ರ ಹಾಗೂ ಕಿರುತೆರೆ ನಿರ್ದೇಶಕ ಟಿ.ಎನ್. ಸೀತಾರಾಮ್, ಚಲನಚಿತ್ರ ನಿರ್ಮಾಪಕ ಬಸಂತ್‌ಕುಮಾರ್ ಪಾಟೀಲ್, ಹಿರಿಯ ಕಲಾವಿ ದತ್ತಾತ್ರೇಯ ಹೆಚ್. ಜಿ.  ಕಲಾವಿದ ಸುಚೇಂದ್ರ ಪ್ರಸಾದ್, ಬಹರಾಗಾರ ಡಾ. ಹನೂರು ಕೃಷ್ಣಮೂರ್ತಿ, ಖ್ಯಾತ ಕಲಾವಿದ ಕು. ಲಕ್ಷ್ಮೀಗೋಪಾಲಸ್ವಾಮಿ, ಸಾಹಿತಿ ಡಾ. ನಾ. ದಾಮೋದರ ಶೆಟ್ಟಿ ಹಾಗೂ ಹಿರಿಯ ಪತ್ರಕರ್ತ ಎಂ.ಕೆ. ಭಾಸ್ಕರ್ ರಾವ್ ಅವರು ನಮ್ಮೊಂದಿಗೆ ಪಾಲ್ಗೊಳ್ಳಲಿದ್ದಾರೆ ಎಂದು ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಹೆಚ್. ಬಿ. ದಿನೇಶ್ ಅವರು ತಿಳಿಸಿದ್ದಾರೆ.

ಎಸ್‌ಎಂ:ಜಿಪಿಆರ್

## ಕಬ್ಬನ್‌ಪಾರ್ಕ್‌ನಲ್ಲಿ ಈ ಭಾನುವಾರ

**ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)**

ಶ್ರೀ ಚಾಮರಾಜೇಂದ್ರ ಉದ್ಯಾನವನ (ಕಬ್ಬನ್ ಪಾರ್ಕ್) ಒಳರಸ್ತೆಗಳಲ್ಲಿ  ಭಾನುವಾರದ ದಿನಗಳಂದು ಸಾರ್ವಜನಿಕ ವಾಹನ ಸಂಚಾರವನ್ನು ನಿಷೇಧಿಸಲಾಗಿದ್ದು, ಉದ್ಯಾನವನದ ಆವರಣದಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರ ಅನುಕೂಲಕ್ಕಾಗಿ ಪ್ರತಿ ಭಾನುವಾರದ ದಿನಗಳಂದು ವಿವಿಧ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗುತ್ತಿರುತ್ತದೆ. ದಿನಾಂಕ: 09-07-2017ರ ಭಾನುವಾರದಂದು ಶ್ರೀ ಚಾಮರಾಜೇಂದ್ರ ಉದ್ಯಾನವನದ (ಕಬ್ಬನ್ ಉದ್ಯಾನವನ) ಬ್ಯಾಂಡ್ ಸ್ಟ್ಯಾಂಡ್ ಆವರಣ ಹಾಗೂ ಮುಂಭಾಗದ ರಸ್ತೆಯಲ್ಲಿ ಮತ್ತು ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಈ ಕೆಳಕಂಡ ಕಾರ್ಯ ಚಟುವಟಿಕೆಗಳನ್ನು

ಹಮ್ಮಿಕೊಳ್ಳಲಾಗಿರುತ್ತದೆ. ಸಾರ್ವಜನಿಕರು, ಪ್ರವಾಸಿಗರು ಮತ್ತು ನಡಿಗೆದಾರರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಸದರಿ ಕಾರ್ಯಚಟುವಟಿಕೆಗಳ ಸದುಪಯೋಗವನ್ನು ಪಡೆದುಕೊಳ್ಳುವಂತೆ ಈ ಮೂಲಕ ಕೋರಲಾಗಿದೆ.

1) ಬೆಳಿಗ್ಗೆ 06.00 ಗಂಟೆಯಿಂದ ಬೆಳಿಗ್ಗೆ 07.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಉದಯರಾಗ" ಎಂಬ ಶೀರ್ಷಿಕೆಯಡಿ **ಐಶ್ವರ್ಯ.ಕೆ.ಎಸ್ ಮತ್ತು ತಂಡ ಬೆಂಗಳೂರು** ರವರಿಂದ **ಸುಗಮ ಸಂಗೀತ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

2) ಸಂಜೆ 04.00 ಗಂಟೆಯಿಂದ ಸಂಜೆ 05.00 ಗಂಟೆಯವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ ಬ್ಯಾಂಡ್ ಸ್ಟ್ಯಾಂಡ್ ಆವರಣದಲ್ಲಿ "ಉದ್ಯಾನವನದಲ್ಲಿ ಸಂಧ್ಯಾರಾಗ" ಎಂಬ ಶೀರ್ಷಿಕೆಯಡಿ **ಶ್ರೀ. ದೊಡ್ಡಹಳ್ಳಿ ರಮೇಶ್ ಮತ್ತು ತಂಡ ಹಾಸನ ಜಿಲ್ಲೆ** ರವರಿಂದ **ಜನಪದ ಗೀತೆ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

3) ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆಯವರೆಗೆ ಉದ್ಯಾನವನದಲ್ಲಿರುವ ಒಳರಸ್ತೆಗಳಲ್ಲಿ ನಗರ ಭೂಸಾರಿಗೆ ನಿರ್ದೇಶನಾಲಯರವರ ಸಹಯೋಗದೊಂದಿಗೆ ಬಾಡಿಗೆ ರಹಿತ ಸೈಕಲ್ ಸವಾರಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

4) ಕಬ್ಬನ್ ಉದ್ಯಾನವನದ ಒಳರಸ್ತೆಗಳಲ್ಲಿ ಸಾರ್ವಜನಿಕರು, ಪ್ರವಾಸಿಗರು ಮತ್ತು ವಯೋವೃದ್ಧರ ಅನುಕೂಲಕ್ಕಾಗಿ ಎರಡು ಸಂಖ್ಯೆಯ ಪರಿಸರ ಸ್ನೇಹಿ ವಿದ್ಯುತ್‌ಚಾಲಿತ ವಾಹನಗಳ ಸೇವೆಯನ್ನು ನಿಗಧಿತ ಶುಲ್ಕ ನೀಡಿ ಸಾರ್ವಜನಿಕರು ಪಡೆಯಬಹುದು.

<u>ಈ ಭಾನುವಾರದ ವಿಶೇಷ ಕಾರ್ಯಕ್ರಮಗಳು:</u>

## I. <u>ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ</u>

- ಬೆಳಿಗ್ಗೆ 7.00 ಗಂಟೆಯಿಂದ 8.00 ಗಂಟೆಯವರೆಗೆ **ಯೂನಿವರ್ಸ್ ಆರ್ಟ್ ಫೌಂಡೇಶನ್** ಸಂಸ್ಥೆಯ ಸಹಯೋಗದೊಂದಿಗೆ **ಶ್ರೀಮತಿ. ಅರ್ಚನಾ ಪುಣ್ಯೇಶ್** ಮತ್ತು ತಂಡ ರವರಿಂದ **ಕುಚ್ಚುಪುಡಿ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.
- ಬೆಳಿಗ್ಗೆ 8.00 ಗಂಟೆಯಿಂದ 9.00 ಗಂಟೆಯವರೆಗೆ ಶ್ರೀವಾಣಿ ವಿದ್ಯಾ ಕೇಂದ್ರ, **ರಾಜಾಜಿ ನಗರ,** ಬೆಂಗಳೂರು **ಶಾಲಾ ವಿದ್ಯಾರ್ಥಿಗಳಿಂದ ಭರತನಾಟ್ಯ** ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

## <u>II.ಸ್ಥಳ: ಶ್ರೀ ಚಾಮರಾಜೇಂದ್ರ ಒಡೆಯರ್ ಪ್ರತಿಮೆಯ ಹತ್ತಿರ</u>

- ಬೆಳಿಗ್ಗೆ 6.00 ರಿಂದ ಬೆಳಿಗ್ಗೆ 9.00 ಗಂಟೆಯವರೆಗೆ ಗ್ಲೆನ್ ಈಗಲ್ಸ್ ಗ್ಲೋಬಲ್ ಆಸ್ಪತ್ರೆ, ರಿಚ್ ಮಂಡ್ ರಸ್ತೆ ರವರಿಂದ ಉಚಿತ ಕಾರ್ಡಿಯಾಕ್ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ.

## ಮಹಿಳೆಯರಿಗೆ ಡಿಪ್ಲೋಮ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್

**ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)**

ಬೆಂಗಳೂರು ನಗರದ ರಾಜಾಜಿನಗರದ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ಸಂಸ್ಥೆಯಲ್ಲಿ ಎಸ್.ಎಸ್.ಎಲ್.ಸಿ. ಪಾಸಾದ ವಿದ್ಯಾರ್ಥಿನಿಯರುಗಳಿಗೆ ಡಿಪ್ಲೋಮ ಇನ್ ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ಕೋರ್ಸ್‌ನ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದ್ದು ಪ್ರಸ್ತುತ ಸೀಮಿತ ಸೀಟುಗಳು ಮಾತ್ರ ಲಭ್ಯವಿರುವುದರಿಂದ ಆಸಕ್ತ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶ ಪಡೆಯಬಹುದಾಗಿದೆ. ಮೊದಲು ಬಂದವರಿಗೆ ಆದ್ಯತೆ ಮೇರೆಗೆ ಪ್ರವೇಶ ನೀಡಲಾಗುವುದು (19–06–2017 ರಿಂದ 30–06–2017 ರವರೆಗೆ) ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 9844312400/ 9141629566.

## ಜುಲೈ 18 ರವರೆಗೆ ಮಿಷನ್ ಇಂಧ್ರದನುಷ್

**ಬೆಂಗಳೂರು, ಜುಲೈ 7 (ಕರ್ನಾಟಕ ವಾರ್ತೆ)**

ಮಿಷನ್ ಇಂಧ್ರದನುಷ್ 4 ನೇ ಹಂತದ ಮೂರನೇ ಸುತ್ತಿನ ಲಸಿಕಾ ಕಾರ್ಯಕ್ರಮ ಇಂದು ಆರಂಭವಾಗಿದ್ದು ಜುಲೈ 18 ರವರೆಗೆ ನಡೆಯಲಿದೆ. ಈ ಕಾರ್ಯಕ್ರಮವು ರಾಜ್ಯದ ಬೆಂಗಳೂರು ನಗರ ಜಿಲ್ಲೆ, ಬಿ.ಬಿ.ಎಂ.ಪಿ., ಬೆಳಗಾವಿ, ವಿಜಯಪುರ, ಕಲಬುರಗಿ, ಮೈಸೂರು ಮತ್ತು ತುಮಕೂರು ಜಿಲ್ಲೆಗಳ ಒಟ್ಟು 46 ಬ್ಲಾಕ್‌ಗಳಲ್ಲಿ ನಡೆಯಲಿದೆ.

ಗರ್ಭಿಣಿ ಮತ್ತು 6 ವರ್ಷದೊಳಗಿನವರ ಮಕ್ಕಳನ್ನು ಲಸಿಕೆ ಹಾಕದವರನ್ನು ಗುರುತಿಸಿ ಅವರಿಗೆ ಲಸಿಕೆ ನೀಡುವ ಅಭಿಯಾನ ಇದಾಗಿದ್ದು ಮೂರನೇ ಸುತ್ತಿನಲ್ಲಿ ಈ ಆರು ಜಿಲ್ಲೆಗಳು ಹಾಗೂ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿ 6592 ಗರ್ಭಿಣಿ ಸ್ತ್ರೀಯರು, 31867 ಎರಡು ವರ್ಷದೊಳಗಿನ ಮಕ್ಕಳು ಹಾಗೂ 38246 ಐದರಿಂದ ಆರು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ.

ಈ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಡಾ: ಶಾಲಿನಿ ರಜನೀಶ್ ಅವರು ಪೂರ್ವಸಿದ್ಧತೆಯನ್ನ ಪರಿಶೀಲಿಸಿ ನೋಡೆಲ್ ಅಧಿಕಾರಿಗಳು ಜಿಲ್ಲೆಗಳಿಗೆ ಭೇಟಿ ನೀಡಿ ಈ ಅಭಿಯಾನದ ಅನುಷ್ಠಾನವನ್ನು ಯಶಸ್ವಿಯಾಗಿ ಮಾಡಬೇಕು ಎಂದು ತಿಳಿಸಿದರು.

ಕಳೆದ ವರ್ಷ ರಾಜ್ಯದಲ್ಲಿ ಒಟ್ಟು 93 ಶಂಕಿತ ಡಿಫ್ತಿರಿಯಾ ಪ್ರಕರಣಗಳು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ 5 ರಿಂದ 6 ವರ್ಷದ ಮಕ್ಕಳಿಗೆ ಡಿಪಿಟಿ ಬೂಸ್ಟರ್ ಡೋಸ್‌ನ್ನು ತಪ್ಪದೆ ಕೊಡಿಸಬೇಕೆಂದು ಅವರು ಪೋಷಕರಿಗೆ ಮನವಿ ಮಾಡಿದರು.

ಇಂಧ್ರಧನುಷ್ ಕಾರ್ಯಕ್ರಮದಡಿಯಲ್ಲಿ 5 ರಿಂದ 6 ವರ್ಷ ವಯೋಮಾನ ಮಕ್ಕಳಿಗೆ ಬೂಸ್ಟರ್ ಡೋಸ್ ನೀಡಲು ಶಿಕ್ಷಣ ಇಲಾಖೆಯಿಂದಲೂ ವಿಶೇಷ ಆದ್ಯತೆ ಮೇರೆಗೆ ನೆರವು ಪಡೆಯಲಾಗುತ್ತದೆ ಎಂದು ತಿಳಿಸಿದರು. ಸರ್ಕಾರಿ ಆಸ್ಪತ್ರೆಗಳ ಕ್ಲಿನಿಕಲ್ ಸೇವೆಯನ್ನು ಪಡೆಯುತ್ತಿರುವ ಎಲ್ಲಾ ನರ್ಸಿಂಗ್ ಕಾಲೇಜುಗಳು ಈ ಕಾರ್ಯಕ್ರಮಕ್ಕೆ ಕೈ ಜೋಡಿಸಲು ಅವರು ತಿಳಿಸಿದರು. ಈ ಅಭಿಯಾನದಡಿ ಲಸಿಕೆ ಹಾಕಿಸುವ ಶೇ. 100 ಗುರಿಯನ್ನು ಸಾಧಿಸುವ ಆಶಾ ಕಾರ್ಯಕರ್ತೆಯರಿಗೆ 5,000 ರೂ. ನಗದು ಬಹುಮಾನ ನೀಡಲಾಗುವುದು ಎಂದು ಅವರು ತಿಳಿಸಿದರು. ಸಭೆಯಲ್ಲಿ ರಾಷ್ಟ್ರೀಯ ನಗರ ಆರೋಗ್ಯ ಅಭಿಯಾನದ ನಿರ್ದೇಶಕ ರತನ್ ಕೇಳ್ಕರ್ ಉಪಸ್ಥಿತರಿದ್ದರು.